ಕೆಲಸ ಮಾಡಲು ಬಂದ ಸಿದ್ರಾಮನ ಮನಸಿನಲ್ಲಿ ಅದು ಉಂಟು ಮಾಡಬಹುದಾದ ಕೋಲಾಹಲದ ಬಗ್ಗೆ ಯಾವುದೇ ಸೂಚನೆಯೂ ಇರಲೂ ಸಾಧ್ಯವಿರಲಿಲ್ಲ. ಸಿದ್ರಾಮ ಸಾಧಾರಣವಾಗಿ ಇಂಥ ಆಮಿಷಗಳಿಗೆ ಬಗ್ಗುವವನಲ್ಲ. ಆದರೆ ಇಂದು ಸಾಧಾರಣ ದಿನವಾಗಿರಲಿಲ್ಲ.

ಸಿದ್ರಾಮ ಮತ್ತವನ ಕುಟುಂಬ ಬೆಂಗಳೂರಿಗೆ ಬರುವ ಮುನ್ನ ಹಾಸನ ಜಿಲ್ಲೆಯ ಹಳ್ಳಿಯೊಂದರಲ್ಲಿದ್ದರು. ಅಲ್ಲಿ ಅವರ ಹೊಲದ ದುಡಿಮೆಯಲ್ಲಿ ಬದುಕು ನಡೆಯುತ್ತಿತ್ತು. ಸಿದ್ರಾಮನ ಅಣ್ಣನೊಬ್ಬನಿದ್ದ. ಅವನು ಸೈಕಲ್ಲಿನಲ್ಲಿ ಹೋಗುತ್ತಿದ್ದರೆ ಯಾವುದೋ ಟ್ರಕ್ಕು ಅವನಿಗೆ ಹೊಡೆದು ಸಹಾಯಕ್ಕೂ ನಿಲ್ಲಿಸದೆ ಹೊರಟು ಹೋಯಿತು. ತಲೆಗೆ ಬಲವಾದ ಏಟು ಬಿದ್ದು ಇವನು ರಸ್ತೆಯಲ್ಲೇ ಒದ್ದಾಡುತ್ತ ಬಿದ್ದಿದ್ದ. ಮನೆಯವರಿಗೆ ತಿಳಿದು ಆಸ್ಪತ್ರೆಗೆ ಸೇರಿಸುವಷ್ಟರಲ್ಲಿ ಕೋಮಾಗೆ ಹೋಗಿದ್ದ. ಅವನ ಚಿಕಿತ್ಸೆಗೆ ವಿಪರೀತ ಸಾಲವಾಯಿತು. ಅವನು ಬದುಕಿ ಉಳಿಯಲೂ ಇಲ್ಲ. ಸಾಲ ತೀರಿಸಲು ಕುಟುಂಬಕ್ಕೆ ಕುಟುಂಬವೇ ಬೆಂಗಳೂರಿಗೆ ಬಂದು ದುಡಿಯುವಂತಾಯಿತು.

ಸಿದ್ರಾಮನಿಗೆ ಇದೆಲ್ಲವೂ ನೆನಪಾಯಿತು. ಅವನ ಬಗ್ಗೆ ಅವನಿಗೇ ಮರುಕ ಹುಟ್ಟಿತು. ಮತ್ತೊಮ್ಮೆ ನೀರು ಕುಡಿದು ಬಂದ. ಆ ಡ್ರಾಯರಿನಿಂದ ದೂರಕ್ಕೆ ದೃಷ್ಟಿ ನೆಟ್ಟು ಬಿಸ್ಕೆಟ್ ಅಲ್ಲಿ ಇಲ್ಲವೇ ಇಲ್ಲವೇನೋ ಎಂಬಂತೆ ನಟಿಸಿದ. ಸ್ವಲ್ಪ ಹೊತ್ತು ನೆಲವನ್ನೇ ದಿಟ್ಟಿಸುತ್ತಾ ಕೆಲಸ ಮಾಡಿ ಉಳಿದದ್ದನ್ನೆಲ್ಲ ಮರೆಯಲು ನೋಡಿದ. ಈ ಉಪಾಯಗಳೆಲ್ಲ ಕೆಲಸ ಮಾಡುತ್ತಿವೆ ಎಂದು ನಂಬಿಕೊಂಡು ಮನಸಿಗೆ ಮತ್ತು ದೇಹಕ್ಕೆ ಮೋಸ ಮಾಡಿದ. ಹೇಗೋ ಆ ಕೋಣೆಯ ಕೆಲಸ ಮುಗಿಸಿ ಬಾಗಿಲಿನತ್ತ ನಡೆದ. ದೂರದಲ್ಲಿ ಬಾಗಿಲಿನ ಬಳಿಯಿದ್ದ ಸಿದ್ರಾಮನ ಮೂಗಿಗೆ ಬಿಸ್ಕೆಟ್ಟಿನೊಳಗೆ ಇದ್ದಿರಬಹುದಾದ ಬೆಣ್ಣೆ ಮತ್ತು ಗೋಡಂಬಿಯ ಸುವಾಸನೆ ಬಡಿಯಲು ಸಾಧ್ಯವಿರಲಿಲ್ಲ. ಆದರೂ ಬಡಿಯದ ವಾಸನೆಯ ಸೆಳೆತ ಅವನನ್ನು ವಾಪಾಸು ಆ ಡೆಸ್ಕಿನ ಬಳಿ ಬರುವಂತೆ ಮಾಡಿದ್ದಂತೂ ನಿಜ. ಬಂದವನೇ ಬಿಸ್ಕೆಟ್ಟನ್ನು ಒಂದೊಂದಾಗಿ ಬಾಯಿಗೆ ತುರುಕಿಕೊಂಡಾಗ ಪ್ರತಿ ಬಿಸ್ಕೆಟ್ಟೂ ಅವನ ದೇಹದಿಂದ ಹಸಿವನ್ನು ಇಷ್ಟಿಷ್ಟೇ ದೂರ ಓಡಿಸಿದ್ದೂ, ಅಲ್ಲಲ್ಲಿ ಸಿಕ್ಕ ಗೋಡಂಬಿಯ ತುಣುಕುಗಳು ಕೈ–ಕಾಲು ನಡುಗುವುದನ್ನು ನಿಲ್ಲಿಸಿದ್ದೂ ನಿಜ.

ಎಲ್ಲ ಬಿಸ್ಕೆಟ್ ತಿಂದು ಮುಗಿಸಿದ ಮೇಲೆ ಸಿದ್ರಾಮ ಕುಕ್ಕರುಗಾಲಿನಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅತ್ತ. ಅದು ಹಸಿವು ನೀಗಿದ ಖುಷಿಗಿದ್ದರೂ ಇರಬಹುದು. ಅಥವಾ ಕದ್ದು ತಿನ್ನುವಂತಾದ ತನ್ನ ಅವಸ್ಥೆಗೆ ಇದ್ದರೂ ಇರಬಹುದು. ಇದನ್ನೆಲ್ಲ ದಾಖಲಿಸುತ್ತಿದ್ದ ಸಿಸಿಟಿವಿ ಕ್ಯಾಮೆರಾಗೆ ಎರಡರ ನಡುವಿನ ವ್ಯತ್ಯಾಸ ತಿಳಿಯಲು ಸಾಧ್ಯವಿರಲಿಲ್ಲ.

***

ಬಿಸ್ಕೆಟ್ ಕದ್ದು ಹೋಗಿರುವುದು ನಿತ್ಯಾಳಿಗೆ ಗೊತ್ತಾಗಿದ್ದು ತಡವಾಗಿ. ಗೊತ್ತಾದ ಕೂಡಲೇ 'ಶ್ರೀಹರಿ! ಶ್ರೀಹರಿ!' ಎಂದು ದೇವರನ್ನು ನೆನಪಿಸಿಕೊಂಡಳು. ಏನಾದರೂ ಆಘಾತವಾದಾಗ ಇಷ್ಟದೈವವನ್ನು ನೆನಪಿಸಿಕೊಳ್ಳುವುದು ಅವಳಿಗೆ ಅವಳ ತಂದೆಯಿಂದ ಬಂದ ಅಭ್ಯಾಸ. ಬೇರೆ ಏನೇನು ಕದ್ದು ಹೋಗಿದೆಯೋ ಎಂದು ಭಯವಾಯಿತು. ಡ್ರಾಯರನ್ನೆಲ್ಲ ಹುಡುಕಾಡಿದಳು. ವಿದೇಶ ಪ್ರವಾಸ ಹೋಗಿದ್ದ ಸಹೋದ್ಯೋಗಿಗಳು ಯಾರೋ ಅಲ್ಲಿಂದ ತಂದುಕೊಟ್ಟಿದ್ದ ಡಿಯೋಡರೆಂಟ್ ಬಾಟಲಿಯೊಂದನ್ನು ಡ್ರಾಯರಿನಲ್ಲಿ ಬಿಟ್ಟಿದ್ದು ನೆನಪು. ಅದು ಈಗ ಅಲ್ಲಿ ಕಾಣಲಿಲ್ಲ. ಯಾರೋ ಮಹಾ ಖದೀಮನೇ ಕದ್ದಿರಬೇಕೆಂದು ತೀರ್ಮಾನಿಸಿದಳು. ಮತ್ತೆ ಶ್ರೀಹರಿಯನ್ನು ನೆನಪಿಸಿಕೊಂಡಳು.

ಪ್ರಪಂಚ ಈಗೀಗ ತೀರಾ ಕೆಡುತ್ತಲಿರುವುದು ಅವಳ ಗಮನಕ್ಕೆ ಬಂದಿತ್ತು. ಮನೆಗೆಲಸದವಳು ಮೂಲೆಗಳಿಗೆ ಪೊರಕೆ ಓಡಿಸುವುದಿಲ್ಲ. ತರಕಾರಿಯವನ ಲೆಕ್ಕ ಅವನಿಗೇ ಅರ್ಥವಾಗಬೇಕು, ಖಂಡಿತ ಮೋಸ ಮಾಡುತ್ತಿದ್ದಾನೆ. ಕರೆಂಟ್ ಬಿಲ್ಲು ಇದ್ದಕ್ಕಿದ್ದ ಹಾಗೆ ಹೆಚ್ಚಾಗುತ್ತದೆ. ನೀರಿನ ಮೀಟರ್ ಜೋರಾಗಿ ಗಾಳಿ ಬೀಸಿದರೂ ಸುದರ್ಶನ ಚಕ್ರದಂತೆ ತಿರುಗುತ್ತದೆಯಂತೆ. ಕೋಟಿಗಟ್ಟಲೆ ಸಾಲ ಮಾಡಿದವರು ದೇಶ ಬಿಟ್ಟು ಓಡಿ ಹೋಗುತ್ತಾರೆ. ಎಲ್ಲಿ ನೋಡಿದರೂ ಮೋಸ, ದಗಾ, ವಂಚನೆ. ತಿನ್ನುವ ಊಟದಲ್ಲೂ ಕಲಬೆರಕೆ. ಮನುಷ್ಯ ಮನುಷ್ಯನ ನಡುವಿನ ಸಂಬಂಧಗಳೂ ಮೊದಲಿನಂತೆ ಉಳಿದಿಲ್ಲ. ಪ್ರಪಂಚವೇ ಕುಲಗೆಟ್ಟು ಕೂತಿದೆ – ಹೀಗೆ ಕದ್ದು ಹೋದ ಬಿಸ್ಕೆಟ್ಟಿನ ನೆಪದಲ್ಲಿ ಶುರುವಾದ ಅವಳ ಆಲೋಚನೆ ಎಲ್ಲವೂ ನಿಯಂತ್ರಣ ತಪ್ಪಿದೆಯೆಂಬ ನಿರ್ಧಾರಕ್ಕೆ ಬಂದು ನಿಂತಿತು. ತನ್ನ ಕೈಲಾದದ್ದು ಏನಾದರೂ ಮಾಡಲೇಬೇಕು, ಕೊನೆಯ ಪಕ್ಷ ಬಿಸ್ಕೆಟ್ ಕದ್ದವನನ್ನು ಹಿಡಿದು ಹಾಕಬೇಕು ಎಂದು ಅವಳು ತೀರ್ಮಾನಿಸಿದಳು. ಎಷ್ಟು ದೊಡ್ಡ ಬದಲಾವಣೆ ಕೂಡ ಒಂದು ಚಿಕ್ಕ ಹೆಜ್ಜೆಯಿಂದಲೇ ಶುರುವಾಗಬೇಕು, ಹಾಗೂ ಎಷ್ಟೇ ಕಷ್ಟವಾದರೂ ತಾನು ಆ ಹೆಜ್ಜೆ ಇಡಲೇಬೇಕು ಎಂದುಕೊಂಡವಳು ಅಡ್ಮಿನ್ ವಿಭಾಗಕ್ಕೆ ಕರೆ ಮಾಡಿ ಬಿಸ್ಕೆಟ್ ಮತ್ತು ಡಿಯೋಡರೆಂಟ್ ಕದ್ದು ಹೋದದ್ದರ ಬಗ್ಗೆ ದೂರು ದಾಖಲಿಸಿದಳು.

ಅಡ್ಮಿನ್ ವಿಭಾಗದ ಮುಖ್ಯಸ್ಥ ಹರಿಹರನ್ ಸಿಸಿಟಿವಿ ರೆಕಾರ್ಡಿಂಗನ್ನೆಲ್ಲ ಜಾಲಾಡಿ ಸಿದ್ರಾಮನ ಅಪರಾಧವನ್ನು ಕಂಡು ಹಿಡಿದ. ಸಿದ್ರಾಮನನ್ನು ಪ್ರಶ್ನಿಸಿದಾಗ ಅವನು "ಸಂಬಳ ಆಗಿಲ್ಲ" ಎಂದ. "ಸಂಬಳ ಆಗ್ದಿದ್ರೆ ಕದೀತೀಯಾ?" ಎಂದು ಹರಿಹರನ್ ದಬಾಯಿಸಿದ.

"ಹೊಟ್ಟೆ ಹಸೀತಿತ್ತು" ಎಂದ ಸಿದ್ರಾಮ.

"ಹೊಟ್ಟೆ ಹಸೀತಿದ್ರೆ ಕದೀತೀಯಾ?" – ಹರಿಹರನ್ ಪುನಃ ದಬಾಯಿಸಿದ.

ಯಾವ ಕಾರಣ ಕೊಟ್ಟರೆ ತನ್ನ ಅಪರಾಧಕ್ಕೆ ಕ್ಷಮಾದಾನವಾಗುತ್ತದೆ ಎನ್ನುವುದು ಸಿದ್ರಾಮನಿಗೆ ಅರ್ಥವಾಗಲಿಲ್ಲ.

"ಅಪ್ಪ ತುಂಬ ಸಾಲ ಮಾಡಿದ್ದಾರೆ. ನನ್ ಅಣ್ಣ ಸತ್ತು ಹೋದ" ಎಂದೆಲ್ಲ ಬಡಬಡಿಸಿದ.

ಅಣ್ಣ ಸತ್ತು ಹೋದ ಎಂದು ಸಿದ್ರಾಮ ಹೇಳಿದ್ದು ವಿಚಿತ್ರ ಅನ್ನಿಸಿ ಹರಿಹರನ್ ಸಿದ್ರಾಮನನ್ನು ದಿಟ್ಟಿಸಿ ನೋಡಿದ. ಸಿದ್ರಾಮ ಹರಿಹರನಿಗಿಂತ ಉದ್ದಕ್ಕಿದ್ದರೂ ವಿನಯದಿಂದ ಬಾಗಿ ನಿಂತಿದ್ದಕ್ಕೆ ಅವನ ಮುಖ ಹರಿಹರನ ಮುಖಕ್ಕೆ ಸಮವಾಗಿತ್ತು. ಅಷ್ಟು ಎತ್ತರದ ದೇಹವನ್ನು ಬಾಗಿಸಿದ್ದಕ್ಕೆ ಅವನೊಂದು ಪ್ರಶ್ನಾರ್ಥಕ ಚಿಹ್ನೆಯಂತೆ ಕಂಡ. ಅಳತೆ ಮೀರಿದ ಅಂಗಿ, ಪ್ಯಾಂಟು. ಗೋಣಿಚೀಲದ ಬಾಯಿಗೆ ಹಗ್ಗ ಬಿಗಿಯುವ ರೀತಿಯಲ್ಲಿ ಪ್ಯಾಂಟಿಗೆ ಬಿಗಿದಿದ್ದ ಬೆಲ್ಟಿನಿಂದಾಗಿಯಷ್ಟೆ ಆ ದೊಗಳೆ ಪ್ಯಾಂಟು ಅವನ ಸೊಂಟದಲ್ಲಿ ನಿಂತಿತ್ತು. ಎಡಗಾಲಿನ ಶೂ ಬಾಯಿ ಬಿಟ್ಟಿತ್ತು.

ಹರಿಹರನಿಗೆ ಕೆಲಸಗಾರರನ್ನು ಯಾವತ್ತೂ ಗುಂಪುಗಳಲ್ಲಿಯೇ ಮಾತಾಡಿಸಿ ಅಭ್ಯಾಸ. ಹೀಗೆ ಒಬ್ಬನನ್ನು ಪ್ರತ್ಯೇಕ ನಿಲ್ಲಿಸಿ ಮಾತಾಡುವ ಅನುಭವ ಹೊಸದು. ಗುಂಪುಗಳಲ್ಲಿ ಜನರನ್ನು ಬಗ್ಗಿಸುವುದು ಸುಲಭ. ತಾನು ಆದೇಶ ಕೊಡುವವನು, ಅವರು ಪಾಲಿಸುವವರು. ಆದರೆ ಹೀಗೆ ಎದುರುಬದುರು ನಿಂತು ಮಾತಾಡುವಾಗ ಈ ಕೆಲಸಗಾರನ ವೇಷದ ಹಿಂದಿರುವ ವ್ಯಕ್ತಿ ಕೂಡ ಒಬ್ಬ ಮನುಷ್ಯನೇ ಎಂಬ ಆಲೋಚನೆ ಬಂತು. ಹರಿಹರನ್ ತನ್ನ ವೇಷವನ್ನು ಅವನ ವೇಷದೊಂದಿಗೆ ಹೋಲಿಸಿ ನೋಡಿಕೊಂಡ. ತಮ್ಮ ತಮ್ಮ ಬದುಕಿನಲ್ಲಿ ನಡೆದ ಘಟನೆಗಳ ಸರಣಿ ತನ್ನನ್ನು ಇಲ್ಲಿ ನಿಲ್ಲಿಸಿದೆ, ಅವನನ್ನು ಅಲ್ಲಿ ನಿಲ್ಲಿಸಿದೆ. ಕೊಂಚ ಏರುಪೇರಾದರೂ ಸ್ಥಾನಗಳು ಅದಲು ಬದಲಾಗಬಹುದಿತ್ತು ಎಂಬ ಘನ ವಿಚಾರವೊಂದು ಹಿಂದಿನ ರಾತ್ರಿ ಕುಡಿದ ಓಲ್ಡ್ ಮಾಂಕಿನ ಅಡ್ಡ ಪರಿಣಾಮವಾಗಿ ಹರಿಹರನ ತಲೆಯಲ್ಲಿ ಹುಟ್ಟಿತು. ಆ ಆಲೋಚನೆಯ ಹಿಂದೆಯೇ ಸಿದ್ರಾಮನ ಮೇಲೆ ಮರುಕವೂ ಹುಟ್ಟಿತು. ಅವನನ್ನು ಕಾಪಾಡಬೇಕೆಂದುಕೊಂಡ. ಘನ ವಿಚಾರಗಳೆಲ್ಲ ತನ್ನೊಬ್ಬನ ಸೊತ್ತಲ್ಲ, ನಿತ್ಯಾ ದೂರು ದಾಖಲಿಸಲು ಕೂಡ ಪ್ರಪಂಚ ಬದಲಿಸುವ ಘನ ಉದ್ದೇಶ ಕಾರಣ ಎಂಬುದು ಹರಿಹರನಿಗೆ ಗೊತ್ತಿದ್ದರೆ ಅವನ ನಿರ್ಧಾರ ಬದಲಾಗುತ್ತಿತ್ತೋ ಏನೋ, ಖಚಿತವಾಗಿ ಹೇಳುವುದು ಸಾಧ್ಯವಿಲ್ಲ.

***

ಅಂದು ಬೆಳಗ್ಗೆ ನಿತ್ಯಾ ಎದ್ದಿದ್ದು ತಡವಾಗಿತ್ತು. ಮಗಳನ್ನು ಡೇ–ಕೇರಿಗೆ ಬಿಟ್ಟು ಬರುವಷ್ಟರಲ್ಲಿ ಆಫೀಸ್ ಬಸ್ಸು ತಪ್ಪುವುದು ಖಂಡಿತವೆಂದು ಅನ್ನಿಸಿ ಮಗಳನ್ನು ತಯಾರು ಮಾಡಲು ಗಂಡನಿಗೆ ಹೇಳಿದರೆ ಅವನು ತನಗೂ ತಡವಾಗುತ್ತಿದೆಯೆಂದು ದಡಬಡನೆ ತಯಾರಾಗಿ ಬೈಕು ಹತ್ತಿ ಹೊರಟೇ ಹೋದ. ಬೇರೆ ದಾರಿಯಿಲ್ಲದೆ ಬಸ್ಸು ತಪ್ಪಿಸಿಕೊಂಡು ಊಬರ್ ಬುಕ್ ಮಾಡಿದಳು. ಕ್ಯಾಬಿನ ಚಾಲಕ ನೈಸ್ ರೋಡಿನಲ್ಲಿ ಟೋಲ್ ಹಣ ಇವಳೇ ಕೊಡಬೇಕೆಂದ. ಕೊನೆಗೆ ಆಫೀಸ್ ತಲುಪಿದ ಮೇಲೆ ಊಬರಿನವರು ಕಳಿಸಿದ ಬಿಲ್ ನೋಡಿದರೆ ಅದರಲ್ಲಿ ಪುನಃ ಟೋಲ್ ಮೊತ್ತವನ್ನು ಸೇರಿಸಿದ್ದರು. ಟೋಲ್ ಮೊತ್ತ ಎರಡೆರಡು ಸಲ ಕೊಡಬೇಕೆ ತಾನೀಗ ಎಂದು ಸಿಟ್ಟು ಹತ್ತಿತು. ಕಸ್ಟಮರ್ ಕೇರಿಗೆ ಕರೆ ಮಾಡಿದರೆ ಚಾಲಕನಿಗೆ ಪ್ರತ್ಯೇಕವಾಗಿ ಕೊಟ್ಟ ಹಣಕ್ಕೂ ತಮಗೂ ಸಂಬಂಧವಿಲ್ಲವೆಂದಳು ಕಸ್ಟಮರ್ ಎಕ್ಸಿಕ್ಯೂಟಿವ್. ಕೊನೆಗೆ "ವೀ ಆರ್ ಸಾರಿ" ಎಂದು ಸೇರಿಸಿ ವಿನಯ ಪ್ರದರ್ಶಿಸಿದಳು. ಅವಳ ಮೊಂಡುತನದಿಂದ ನಿತ್ಯಾಳಿಗೆ ಸಿಟ್ಟು ಇನ್ನೂ ಹೆಚ್ಚಿತು. ಆದರೆ ಏನೂ ಮಾಡುವಂತಿರಲಿಲ್ಲ.